# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ

## ಸಿ.ಸಿಃ 615/2025

ಫ್ರಾಸಾ–4, ಚಾಸಾ–2

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿದ್ದು |
| ತಂದೆಯ ಹೆಸರು | : | ಮುದ್ದುಬಸವಯ್ಯ |
| ವಯಸ್ಸು | : | 31ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಕೊತ್ತಲವಾಡಿ |

ಸಾಕ್ಷಿಗೆ ದಿನಾಂಕಃ 03.03.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಿಪಿ–1 ದಾಖಲೆಗೆ ಈಗ್ಗೆ ಆರು ವರ್ಷಗಳ ಹಿಂದೆ ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನ ಎಂದು ಹೇಳಿ ಸಾಕ್ಷಿಯು ತನ್ನ ಸಹಿಯನ್ನು ಗುರ್ತಿಸಿದ್ದರಿಂದ ನಿಪಿ–1ರಲ್ಲಿರುವ ಸಹಿಯನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಮುದ್ದೆಮಾಲುಗಳನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಮಾನ್ಯ ಎಪಿಪಿರವರರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕಃ 18.01.2020 ರಂದು ನಾನು ಮತ್ತು ಚಾಸಾ–2ರವರು ಕಿಳಗೆರೆ ಗ್ರಾಮದ ಹೊಸ ಬಡಾವಣೆ ಕಡೆ ನಡೆದುಕೊಂಡು ಹೋಗುತ್ತಿದ್ದಾಗ ಸಂಃ 4.30ರ

ಸಮಯದಲ್ಲಿ ಚಾಸಾ-1ರವರು ತಮ್ಮ ಇಲಾಖಾ ಜೀಪಿನಲ್ಲಿ ಪೊಲೀಸ್ ಸಿಬ್ಬಂದಿಗಳ ಜೊತೆ ಬಂದು ನಮ್ಮನ್ನು ಭೇಟಿಯಾಗಿ ಚಾಸಾ-1ರವರಿಗೆ ಕಿಲಗೆರೆ ಗ್ರಾಮದ ಪರಿಶಿಷ್ಟರ ಬೀದಿಯಲ್ಲಿ ಯಾರೋ ಒಬ್ಬ ಆಸಾಮಿಯು ಬಸ್ಸನಲ್ಲಿ ಅಕ್ರಮವಾಗಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಪೌಚ್‌ಗಳನ್ನು ತೆಗೆದುಕೊಂಡು ಬರುತ್ತಿದ್ದಾನೆ ಎಂದು ಖಚಿತ ಮಾಹಿತಿ ಬಂದಿರುವ ವಿಚಾರವನ್ನು ನಮಗೆ ತಿಳಿಸಿದರು ಎಂದರೆ ಸರಿಯಲ್ಲ.

ಆ ನಂತರ ನಾವುಗಳು ಪಂಚರಾಗಲು ಒಪ್ಪಿ ಪೊಲೀಸರ ಜೊತೆ ಜೀಪಿನಲ್ಲಿ ಹೋದೇವು, ನಾವುಗಳು ಕಿಲಗೆರೆ ಗ್ರಾಮದ ಬಸವೇಶ್ವರ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಮರೆಯಾಗಿ ನಿಂತು ಕಾಯುತ್ತಿದ್ದಾಗ ಸಂಃ 4.45ರ ಸಮಯದಲ್ಲಿ ಒಂದು ಖಾಸಗಿ ಬಸ್ಸು ತೆರಕಣಾಂಬಿ ಕಡೆಯಿಂದ ಕಾಗಲವಾಡಿ ಕಡೆಗೆ ಹೋಗಲು ಕಿಲಗೆರೆ ಗ್ರಾಮದ ನಿಲ್ದಾಣದ ಹತ್ತಿರ ನಿಂತಾಗ ಕೆಲವು ಪ್ರಯಾಣಿಕರು ಬಸ್ಸಿನಲ್ಲಿ ಇಳಿದರು ಆಗ ಅವರ ಜೊತೆ ಇನ್ನೊಬ್ಬ ಆಸಾಮಿಯು ಕೈಯಲ್ಲಿ ಒಂದು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ಇಳಿದು ಬಸವೇಶ್ವರ ದೇವಸ್ಥಾನದ ಕಡೆಯಲ್ಲಿ ಪರಿಶಿಷ್ಟರ ಬೀದಿಯಲ್ಲಿ ಬರುತ್ತಿದ್ದನು ಎಂದರೆ ಸರಿಯಲ್ಲ.

ಆಗ ಪೊಲೀಸರು ಆತನನ್ನು ತಡೆದು, ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ನೋಡಿದಾಗ ಅದರಲ್ಲಿ ಮದ್ಯದ ಟೆಟ್ರಾಪ್ಯಾಕ್‌ಗಳಿರುವುದು ಕಂಡುಬಂತು ಎಂದರೆ ಸರಿಯಲ್ಲ.

ಸದರಿ ಆಸಾಮಿಯ ಹೆಸರು ವಿಳಾಸ ಕೇಳಿದಾಗ ಆತನು ತನ್ನ ಹೆಸರನ್ನು ಸಿದ್ದರಾಜು ಬಿನ್ ಸಿದ್ದಯ್ಯ, ಕೂಲಿ ಕೆಲಸ, ಕಿಲಗೆರೆ ಗ್ರಾಮ, ಚಾಮರಾಜನಗರ ತಾಲ್ಲೂಕು ಎಂದು ತಿಳಿಸಿದ ಎಂದರೆ ಸರಿಯಲ್ಲ. ಆಗ ಪೊಲೀಸರು ಆಸಾಮಿಯ ವಶದಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದರು, ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕೀಯ ಮದ್ಯ ತುಂಬಿದ 34 ಟೆಟ್ರಾಪ್ಯಾಕ್‌ಗಳಿದ್ದವು ಎಂದರೆ ಸರಿಯಲ್ಲ.

ಪೊಲೀಸರು ನಮ್ಮಗಳ ಸಮಕ್ಷಮ ಟೆಟ್ರಾಪ್ಯಾಕ್‌ಗಳ ಎಲ್ಲಾ ವಿವರವನ್ನು ತಿಳಿದುಕೊಂಡು ಬರೆದುಕೊಂಡರು ಎಂದರೆ ಸರಿಯಲ್ಲ. ಅಲ್ಲಿ ದೊರೆತ ಎಲ್ಲಾ ಮದ್ಯದ

ಪೌಚ್‌ಗಳ ನ್ನು ನಮ್ಮಗಳ ಸಮಕ್ಷಮ ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಆರ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿದರು ಎಂದರೆ ಸರಿಯಲ್ಲ.

ಪೊಲೀಸರು ನಮ್ಮಗಳ ಸಮಕ್ಷಮ ಆರೋಪಿಯನ್ನು ಮತ್ತು ಮದ್ಯದ ಪೌಚ್‌ಗಳನ್ನು ಹಾಗೂ ಪ್ಲಾಸ್ಟಿಕ್ ಚೀಲವನ್ನು ಸಂಃ 5 ರಿಂದ 6.30 ರವರೆಗೆ ನಿಪಿ–1ರಂತೆ ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲೇ ಹಾಜರಿದ್ದು ನಿಪಿ–1ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನ ಮು.ಮಾ–1 ರಿಂದ 35ಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಆಸಾಮಿಯೇ ಆಗಿರುತ್ತಾನೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ದಿಃ 19.01.2020 ನಿಪಿ–6ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.